ಓ.ಎಸ್ಃ 460 /2013

ಪಿ. ಡಬ್ಲ್ಯೂ ಃ 04

**<u>ಸಾಕ್ಷಿಗೆ ದಿನಾಂಕ 25.04.2018 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀಮತಿ ವಿ.ಪಿ ವಕೀಲರಿಂದ</u>**

ನಾನು 4-5 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿ ಪ್ರತಿವಾದಿಯ ವಿರುದ್ದ ನಿವೇಶನದ ವಿಚಾರವಾಗಿ ಈ ದಾವೆ ಸಲ್ಲಿಸಿದ್ದಾರೆ. ನಾನು ಸದರಿ ನಿವೇಶನವನ್ನು ನೋಡಿದ್ದೇನೆ. ದಾವಾ ಆಸ್ತಿ ವಿಸ್ತೀರ್ಣ 45 ಇಂಟು 35 ಅಡಿ ಇದೆ. ಸದರಿ ಆಸ್ತಿ ವಾದಿಯ ತಾಯಿಗೆ ಸೇರಿದ್ದು ಅವರೆಲ್ಲರೂ ಸೇರಿ ವಾದಿಗೆ ಬರೆದುಕೊಟ್ಟಿದ್ದಾರೆ. ಆ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಕುಂಟೇಗೌಡ ರವರ ಮಗ ರಮೇಶ ರವರಿಗೆ ಕ್ರಯ ಪತ್ರದ ಮೂಲಕ ಆಸ್ತಿಯನ್ನು ನೀಡಿದ್ದಾರೆ. ನಾನು ಸದರಿ ಕ್ರಯದ ವ್ಯವಹಾರಕ್ಕೆ ಸಾಕ್ಷಿಯಾಗಿ ಸಹಿ ಮಾಡಿಲ್ಲ. ವಾದಿಯ ಹೆಂಡತಿ ಈ ದಾವೆ ಸಲ್ಲಿಸುವ ಕಾಲಕ್ಕೆ ಗ್ರಾಮ ಪಂಚಾಯಿತಿ ಸದಸ್ಯರು ಎಂದರೆ ಹೌದು. ದಾವಾ ಆಸ್ತಿ ವಾದಿಗೆ ಸೇರಿರುತ್ತದೆ ಎಂದು ತೋರಿಸಲು ನಾನು ಪಂಚಾಯಿತಿ ದಾಖಲೆಗಳನ್ನು ನೋಡಿಲ್ಲ. ದಾವಾ ಆಸ್ತಿ ವಾದಿಯ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ವಾದಿಯ ಹೆಂಡತಿ ಪಂಚಾಯಿತಿ ಸದಸ್ಯರಾಗಿರುವ ಕಾರಣ ಅವರಿಂದ ಏನಾದರೂ ಅನುಕೂಲ ಪಡೆಯುವ ಉದ್ದೇಶದಿಂದ ಅವರ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯೊಂದಿಗೆ ರಾಜಕೀಯ

ವ್ಯಕ್ತಿಯಾಗಿದ್ದು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ